**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್‌ಃ 117/2018**

ಸಿಡಬ್ಲ್ಯೂಃ 6

ಪಿಡಬ್ಲ್ಯೂಃ 5

| | | |
|---|---|---|
| ಸಾಕ್ಷಿಯ ಹೆಸರು | : | ದ್ಯಾವನಗೌಡ ಕರೇಗೌಡ |
| ತಂದೆಯ ಹೆಸರು | : | ಹನುಮಂತಗೌಡ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಡೂರು |

ಇಂದು ದಿನಾಂಕಃ 07.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

1. ಚಾಸಾ–1 ನನಗೆ ಗೊತ್ತು. ಚಾಸಾ–7 ನನ್ನ ಅತ್ತಿಗೆ. ಚಾಸಾ–8 ರಿಂದ 13 ನನಗೆ ಗೊತ್ತಿಲ್ಲ. 2017 ರಲ್ಲಿ ಅಬಲೂರು ಗ್ರಾಮದಲ್ಲಿ ನಾಮಕರಣ ಕಾರ್ಯಕ್ರಮವನ್ನು ಮುಗಿಸಿಕೊಂಡು ಆಟೋದಲ್ಲಿ ಸುಮಾರು 3–4 ಜನ ಬರುವಾಗ, ಸದರಿ ಆಟೋವನ್ನು ಆರೋಪಿ 1 ರವರು ಚಲಾಯಿಸುತ್ತಿದ್ದರು. ನಾನು ಸದರಿ ಆಟೋದಲ್ಲಿ ಹಿಂದೆ ಕುಳಿತುಕೊಂಡಿದ್ದು, ಉಳಿದವರು ಮುಂದೆ ಕುಳಿತುಕೊಂಡಿದ್ದರು. ಸದರಿ ಆಟೋ ಅಬಲೂರಿನಿಂದ ರಟ್ಟೀಹಳ್ಳಿಯ ಕುಮುದ್ವತಿ ನದಿ ಹತ್ತಿರ ಆಟೋ ಪಲ್ಟಿಯಾಯಿತು.

2. ನಾನು ಹೊಲದ ಕಡೆ ನೋಡಿಕೊಂಡು ಕುಳಿತುಕೊಂಡಿದ್ದು ಪಲ್ಟಿ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತದಲ್ಲಿ ಮಲ್ಲಮ್ಮ ತೀರಿಕೊಂಡಿದ್ದು, ನನಗೆ ಸಣ್ಣಪುಟ್ಟ ಗಾಯಗಳಾಗಿರುತ್ತವೆ. ಉಳಿದವರಿಗೆ ಯಾವುದೇ ಗಾಯ ಆಗಿರುವುದಿಲ್ಲ. ದೂರನ್ನು ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಆರೋಪಿ 1 ರವರೇ ಆ ದಿನ ಆಟೋ ಚಲಾಯಿಸುತ್ತಿದ್ದರು.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ</u>** ಮಾನ್ಯ ಎಪಿಪಿಯವರಿಂದಃ

1. 2017 ಎಂದರೆ ಆ ದಿನ ದಿನಾಂಕಃ 19.03.2017 ಎಂದರೆ ಸರಿ. ಆ ದಿನ ಅಬಲೂರು ಗ್ರಾಮದಲ್ಲಿ ನನ್ನ ಮಗನ ತೊಟ್ಟಿಲು ಕಾರ್ಯಕ್ರಮ ಇತ್ತು ಎಂದರೆ ಸರಿ. ಆ ದಿನ ನಮ್ಮೂರಿನಿಂದ ಜನರನ್ನು ಕರೆದುಕೊಂಡು ಬರಲು ಆರೋಪಿ 1ರವರ ಪ್ಯಾಸೆಂಜರ್ ಆಟೋ ರಿಕ್ಷಾ ಕೆಎ-27/ಬಿ-6854 ನ್ನು ಬಾಡಿಗೆ ಕಳುಹಿಸಿದ್ದೆನು ಎಂದರೆ ಸರಿ. ಆ ಪ್ರಕಾರ ಸದರಿ ಆಟೋದಲ್ಲಿ ಚಾಸಾ-8 ರಿಂದ 12, ಮೃತ ಮಲ್ಲಮ್ಮ ಹಾಗೂ ಮೃತ ಮಲ್ಲಮ್ಮಳ ಮೊಮ್ಮಗ ಗಗನ ಬಂದಿರುತ್ತಾರೆ ಎಂದರೆ ಸರಿ.

2. ಹಿಂದಿರುಗಿ ಹೋಗುವಾಗ ಸದರಿ ಆಟೋದಲ್ಲಿ ಅವರೊಂದಿಗೆ ನಾನು, ನನ್ನ ಅತ್ತಿಗೆ ಚಾಸಾ-7, ನನ್ನ ಅಣ್ಣದ ಮಗಳಾದ ಪ್ರಿಯಾ ಹಾಗೂ ನನ್ನ ತಂಗಿ ನಿರ್ಮಲಾ ಮತ್ತು ಅವರ ಮಗಳು ಲಿಖಿತಾ ಹೋಗಿರುತ್ತೇವೆ ಎಂದರೆ ಸರಿ. ಆ ಪ್ರಕಾರ ನಾವು ಅಬಲೂರಿಗೆ ಹೋಗಿ ನನ್ನ ಮಗನ ತೊಟ್ಟಿಲು ಕಾರ್ಯಕ್ರಮ ಮುಗಿಸಿರುತ್ತೇವೆ ಎಂದರೆ ಸರಿ. ನಂತರ ಕಾರ್ಯಕ್ರಮ ಮುಗಿಸಿಕೊಂಡು ನಾನು ಎಲ್ಲರನ್ನೂ ಆಟೋದಲ್ಲಿ ಹತ್ತಿಸಿರುತ್ತೇನೆ ಎಂದರೆ ಸಾಕ್ಷಿಯು ಕಾರ್ಯಕ್ರಮ ಮುಗಿದ ನಂತರ ಅಲ್ಲಿ ಉಳಿದುಕೊಳ್ಳಿ ಎಂದಿದ್ದರಿಂದ ನಾವು 4 ಜನರಾದ ನಾನು, ಚಾಸಾ-7, ಮೃತ ಮಲ್ಲಮ್ಮ ಮತ್ತು ನಿರ್ಮಲಾ ಆಟೋದಲ್ಲಿ ಹತ್ತಿರುತ್ತೇವೆ ಎಂದು ನುಡಿಯುತ್ತಾರೆ.

3. ಅಬಲೂರಿನಿಂದ ಕೋಡ-ರಟ್ಟೀಹಳ್ಳಿ ಮಾರ್ಗವಾಗಿ ಕಡೂರು ಹತ್ತಿರ ಸದರಿ ಆಟೋವನ್ನು ಅತೀ ಜೋರಾಗಿ ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಬರುತ್ತಿರುವಾಗ ಕುಮದ್ವತಿ ಸೇತುವೆ ಹತ್ತಿರ ನಿಂತಿದ್ದ ಮೋಟಾರ್ ಸೈಕಲ್‌ಗೆ ಡಿಕ್ಕಿ ಹೊಡೆಯುತ್ತೇನೆ ಎಂದು ತಿಳಿದು ಒಮ್ಮೆಲೆ ಎಡಕ್ಕೆ ಕಟ್ ಮಾಡಿ, ಬಲಕ್ಕೆ ಕಟ್ ಮಾಡಿದ್ದರಿಂದ ನಿಯಂತ್ರಣ ತಪ್ಪಿ ಹೋಗಿ ಆಟೋ ರಿಕ್ಷಾ ಪಲ್ಟಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

4. ಸದರಿ ಅಪಘಾತದಿಂದ ನನಗೆ ಬೆನ್ನಿಗೆ, ಚಾಸಾ-13ರವರಿಗೆ ತಲೆಗೆ, ಚಾಸಾ-12ರವರ ಎಡಕೈ ಮೊಣಕೈ, ಬಲಹೆಗಲಿಗೆ, ಬಲಭುಜಕ್ಕೆ, ಬಲಗಾಲಿಗೆ, ಚಾಸಾ-11ರವರ ಎಡಗಣ್ಣಿನ ಹುಬ್ಬಿನ ಮೇಲೆ, ಚಾಸಾ-10 ರವರ ಬಲಭುಜಕ್ಕೆ, ಚಾಸಾ-9 ರವರ ಬಲಕಿವಿಗೆ, ಚಾಸಾ-7ರವರ ಬಲಗೈ ಮೊಣಕೈಗೆ, ಚಾಸಾ-8ರವರಿಗೆ ಬಲಗಣ್ಣಿನ ಮೇಲೆ, ಎಡಗಾಲಿನ ಮೊಣಕಾಲಿಗೆ, ನಿರ್ಮಲಾರಿಗೆ ತಲೆಗೆ ಹಾಗೂ ಬಲಗೈ ಮೊಣಕೈಗೆ, ಮೃತ ಮಲ್ಲಮ್ಮಳಿಗೆ ಎದೆಗೆ, ಬಲ ಪಕ್ಕೆಯ ಹತ್ತಿರ, ಎಡಗಾಲು ಪಾದದ ಮೇಲೆ ಹಾಗೂ ಇನ್ನಿತರರಿಗೆ ಗಾಯಗಳಾಗಿರುತ್ತವೆ ಎಂದರೆ ಸಾಕ್ಷಿಯು ಸಣ್ಣಪುಟ್ಟಗಾಯಗಳಾಗಿರುತ್ತವೆ ಎಂದು ನುಡಿಯುತ್ತಾರೆ.

5. ಆಗ ಅಲ್ಲಿಗೆ ಆಂಬುಲೆನ್ಸ್ ಬಂದು ನಮ್ಮೆಲ್ಲರನ್ನು ರಟ್ಟೀಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಅಲ್ಲಿ ನನಗೆ ಚಾಸಾ-12 ಹಾಗೂ ಮೃತ ಮಲ್ಲಮ್ಮಳಿಗೆ ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ಹೋಗಲು ತಿಳಿಸಿರುತ್ತಾರೆ ಎಂದರೆ ಸರಿ. ಆ ಪ್ರಕಾರ ನಾವು ಅಲ್ಲಿಂದ ರಾಣೆಬೆನ್ನೂರಿಗೆ ಹೋಗುತ್ತಿದ್ದಾಗ, ರಟ್ಟೀಹಳ್ಳಿಯ ಪೆಟ್ರೋಲ್ ಬಂಕ್ ಹತ್ತಿರ ಮಲ್ಲಮ್ಮ ಮರಣ ಹೊಂದಿರುತ್ತಾರೆ ಎಂದರೆ ಸರಿ. ನಂತರ ಮೃತ ಮಲ್ಲಮ್ಮಳನ್ನು ಶವಗಾರಕ್ಕೆ ಸೇರಿಸಿ ನಾನು ಹಾಗೂ ಚಾಸಾ-12 ಶಿವಮೊಗ್ಗದ ಮೆಗ್ಗಾನ ಆಸ್ಪತ್ರೆಗೆ ಹೋಗಿರುತ್ತೇವೆ ಎಂದರೆ ಸರಿ.

6. ನಂತರ ಈ ಬಗ್ಗೆ ನನ್ನ ತಂಗಿಯಾದ ಚಾಸಾ-1 ರವರು ದೂರನ್ನು ನೀಡಿರುತ್ತಾರೆ ಎಂದರೆ ಸರಿ. ನಂತರ ನಾನು ಮೋಟಾರ್ ಸೈಕಲ್‌ನ ಚಾಲಕನ ತಪ್ಪಿನಿಂದಲೂ ಅಪಘಾತ ಆಗಿದೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ತಿರಸ್ಕರಿಸಿದ ಹೇಳಿಕೆ ಭಾಗವನ್ನು ನಿಪಿ-30 ಎಂದು ಗುರುತಿಸಲಾಯಿತು. ಸದರಿ ಅಪಘಾತ ಮೋಟಾರ್ ಚಾಲಕ ಹಾಗೂ ಆಟೋ ಚಾಲಕ ಇಬ್ಬರು ತಪ್ಪಿನಿಂದಲೂ ಆಗಿದೆ ಎಂದು ಗೊತ್ತಿದ್ದರೂ ಸಹ ನಾನು ಮೋಟಾರ್ ಸೈಕಲ್ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** ಆರೋಪಿ 1 ರವರ ಪರ ಶ್ರೀ. ವಿ.ವಿ.ಎಮ್. ವಕೀಲರಿಂದಃ

ಅಬಲೂರಿನಿಂದ 4 ಜನ ಬಂದು ಇಲ್ಲಿಂದಲೂ ಸಹ 4 ಜನ ಹೋಗಿರುತ್ತೇವೆ ಎಂದರೆ ಸಾಕ್ಷಿಯು ಅಬಲೂರಿನಿಂದ ಎಲ್ಲರೂ ಹೋಗಿದ್ದು, ಮರಳಿ ಬರುವಾಗಿ 4 ಜನ ಬಂದಿರುತ್ತೇವೆ ಎಂದು ನುಡಿಯುತ್ತೇವೆ. 4 ಜನರನ್ನು ಹೊರತುಪಡಿಸಿ ಬೇರೆ ಯಾರಿಗೂ ಗಾಯವಾಗಿಲ್ಲ ಎಂದರೆ ಸರಿ. ಆಟೋದಲ್ಲಿ ಕೇವಲ 4 ಜನ ಇದ್ದು, ಬೇರೆ ಯಾರೂ ಇರದಿದ್ದರಿಂದ ಅವರಿಗೆ ಗಾಯವಾಗಿಲ್ಲ ಎಂದರೆ ಸರಿ. ನಾನು ಆಟೋದಲ್ಲಿ ಹಿಂದೆ ಕುಳಿತುಕೊಂಡು ಹೊಲದಲ್ಲಿರುವ ಬೆಳೆಗಳನ್ನು ನೋಡುತ್ತಿದ್ದೆ. ಆಗ ನನ್ನ ಗಮನ ಸಂಪೂರ್ಣವಾಗಿ ಹೊಲದ ಬೆಳೆಗಳ ಕಡೆಗೆ ಇತ್ತು ಎಂದರೆ ಸರಿ.

**<u>ಪಾಟೀ ಸವಾಲುಃ</u>** ಆರೋಪಿ 2 ರವರ ಪರ ಶ್ರೀ. ಆರ್.ಡಿ.ಹೆಚ್. ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್ಃ 117/2018**

ಸಿಡಬ್ಲ್ಯೂಃ 7

ಪಿಡಬ್ಲ್ಯೂಃ 6

| | | |
|---|---|---|
| ಸಾಕ್ಷಿಯ ಹೆಸರು | : | ಗೀತಾ ಕರೇಗೌಡ್ರ |
| ಗಂಡನ ಹೆಸರು | : | ಚಂದ್ರಗೌಡ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | : | ಕಡೂರು |

ಇಂದು ದಿನಾಂಕಃ 07.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

1. ಚಾಸಾ–1 ನನ್ನ ನಾದಿನಿ. ಚಾಸಾ–6 ನನ್ನ ಮೈದುನ. ಸುಮಾರು 6–7 ವರ್ಷಗಳ ಹಿಂದೆ ಚಾಸಾ–6 ರವರ ಮಗನ ತೊಟ್ಟಿಲು ಕಾರ್ಯಕ್ರಮಕ್ಕೆ ಅಬಲೂರು ಗ್ರಾಮಕ್ಕೆ ಆಟೋದಲ್ಲಿ ನಾವು 5–6 ಜನ ಹೋಗಿದ್ದೆವು. ಆಟೋವನ್ನು 1 ನೇ ಆರೋಪಿ ಚಲಾಯಿಸುತ್ತಿದ್ದ. ಅಲ್ಲಿಂದ ಕಾರ್ಯಕ್ರಮ ಮುಗಿಸಿಕೊಂಡು 4 ಜನ ಅದೇ ಆಟೋದಲ್ಲಿ ಬರುತ್ತಿರುವಾಗ 1 ನೇ ಆರೋಪಿ ಆಟೋ ಚಲಾಯಿಸುತ್ತಿದ್ದ. ಆಟೋದ ಮಧ್ಯದಲ್ಲಿ ನಾನು ಕುಳಿತುಕೊಂಡಿದ್ದೆ. ನಾನು ನಿದ್ರೆ ಮಾಡುತ್ತಿದ್ದರಿಂದ ಅಪಘಾತ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತ ರಟ್ಟೀಹಳ್ಳಿಯ ಕುಮದ್ವತಿ ನದಿಯ ಹತ್ತಿರ ಆಗಿರುತ್ತವೆ.

2. ಸದರಿ ಅಪಘಾತದಿಂದ ನನ್ನ ಕಾಲು ಮತ್ತು ಕೈಗೆ ಸಣ್ಣಪುಟ್ಟ ಗಾಯಗಳಾಗಿರುತ್ತವೆ. ಉಳಿದವರಿಗೂ ಸಹ ಸಣ್ಣಪುಟ್ಟ ಗಾಯಗಳಾಗಿದ್ದವು. ನಂತರ ನಾವು ರಟ್ಟೀಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನನ್ನ ದೊಡ್ಡಮ್ಮರಾದ ಮಲ್ಲಮ್ಮರವರು ಸದರಿ ಅಪಘಾತದಿಂದ ತೀರಿ ಹೋಗಿರುತ್ತಾರೆ. ಈ ಬಗ್ಗೆ ದೂರನ್ನು ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ–23 ಹಾಗೂ 24 ರಲ್ಲಿರುವ ಆಟೋವನ್ನು ನೋಡಿ ಗುರುತಿಸಿ, ಸದರಿ ಆಟೋದಲ್ಲಿ ನಾವು ಹೋಗಿರುತ್ತೇವೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಎಪಿಪಿಯವರಿಂದಃ

1. ಸುಮಾರು 5-6 ವರ್ಷಗಳ ಹಿಂದೆ ಎಂದರೆ ಆ ದಿನ ದಿನಾಂಕಃ 19.03.2017 ಎಂದರೆ ಸಾಕ್ಷಿಯು ತಾರೀಖು ಗೊತ್ತಿಲ್ಲ ಆದರೆ 2017 ಇಸವಿ ಎಂದು ನುಡಿಯುತ್ತಾರೆ. ಆ ದಿನ ಅಬಲೂರು ಗ್ರಾಮದಲ್ಲಿ ನನ್ನ ಮೈದುನನ ಮಗನ ತೊಟ್ಟಿಲು ಕಾರ್ಯಕ್ರಮ ಇತ್ತು ಎಂದರೆ ಸರಿ. ಆ ದಿನ ನಮ್ಮೂರಿನಿಂದ ಜನರನ್ನು ಕರೆದುಕೊಂಡು ಬರಲು ಆರೋಪಿ 1 ರವರ ಪ್ಯಾಸೆಂಜರ್ ಆಟೋ ರಿಕ್ಷಾ ಕೆಎ-27/ಬಿ-6854 ನ್ನು ಬಾಡಿಗೆ ಕಳುಹಿಸಿದ್ದರು ಎಂದರೆ ಸರಿ. ಆ ಪ್ರಕಾರ ಸದರಿ ಆಟೋದಲ್ಲಿ ಚಾಸಾ-1, 8 ರಿಂದ 12, ಮೃತ ಮಲ್ಲಮ್ಮ ಹಾಗೂ ಮೃತ ಮಲ್ಲಮ್ಮಳ ಮೊಮ್ಮಗ ಗಗನ ಮತ್ತು ಲಿಖಿತಾ ಹೋಗಿ ಅಲ್ಲಿಯ ಕಾರ್ಯಕ್ರಮ ಮುಗಿಸಿರುತ್ತೇವೆ ಎಂದರೆ ಸರಿಯಲ್ಲ

2. ನಂತರ ಹಿಂದಿರುಗಿ ಬರುವಾಗ ನಾವೆಲ್ಲರೂ ಸದರಿ ಆಟೋದಲ್ಲಿ ಹತ್ತಿರುತ್ತೇವೆ ಎಂದರೆ ಸರಿಯಲ್ಲ. ಆ ಪ್ರಕಾರ ಅಬಲೂರಿನಿಂದ ಕೋಡ-ರಟ್ಟೀಹಳ್ಳಿ ಮಾರ್ಗವಾಗಿ ಕಡೂರು ಹತ್ತಿರ ಸದರಿ ಆಟೋವನ್ನು ಅತೀ ಜೋರಾಗಿ ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಬರುತ್ತಿರುವಾಗ ಕುಮದ್ವತಿ ಸೇತುವೆ ಹತ್ತಿರ ನಿಂತಿದ್ದ ಮೋಟಾರ್ ಸೈಕಲ್‌ಗೆ ಡಿಕ್ಕಿ ಹೊಡೆಯುತ್ತೇನೆ ಎಂದು ತಿಳಿದು ಒಮ್ಮೆಲೆ ಎಡಕ್ಕೆ ಕಟ್ ಮಾಡಿ, ಬಲಕ್ಕೆ ಕಟ್ ಮಾಡಿದ್ದರಿಂದ ನಿಯಂತ್ರಣ ತಪ್ಪಿ ಹೋಗಿ ಆಟೋ ರಿಕ್ಷಾ ಪಲ್ಟಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

3. ಸದರಿ ಅಪಘಾತದಿಂದ ನನಗೆ ಬಲಮೊಣಕಾಲಿಗೆ, ತಲೆಗೆ, ಚಾಸಾ-6 ರವರಿಗೆ ಬೆನ್ನಿಗೆ, ಚಾಸಾ-13 ರವರಿಗೆ ತಲೆಗೆ, ಚಾಸಾ-12 ರವರ ಎಡಕೈ ಮೊಣಕೈ, ಬಲಹೆಗಲಿಗೆ, ಬಲಭುಜಕ್ಕೆ, ಬಲಗಾಲಿಗೆ, ಚಾಸಾ-11 ರವರ ಎಡಗಣ್ಣಿನ ಹುಬ್ಬಿನ ಮೇಲೆ, ಚಾಸಾ-10 ರವರ ಬಲಭುಜಕ್ಕೆ, ಚಾಸಾ-9 ರವರ ಬಲಕಿವಿಗೆ, ಚಾಸಾ-8 ರವರಿಗೆ ಬಲಗಣ್ಣಿನ ಮೇಲೆ, ಎಡಗಾಲಿನ ಮೊಣಕಾಲಿಗೆ, ನಿರ್ಮಲಾರಿಗೆ ತಲೆಗೆ ಹಾಗೂ ಬಲಗೈ ಮೊಣಕೈಗೆ, ಮೃತ ಮಲ್ಲಮ್ಮಳಿಗೆ ಎದೆಗೆ, ಬಲ ಪಕ್ಕೆಯ ಹತ್ತಿರ, ಎಡಗಾಲು ಪಾದದ ಮೇಲೆ ಹಾಗೂ ಇನ್ನಿತರರಿಗೆ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. 4 ಜನರಿಗೆ ಮಾತ್ರ ಗಾಯಗಳಾಗಿರುತ್ತವೆ ಎಂದು ನುಡಿಯುತ್ತಾರೆ.

4. ನಂತರ ನಮ್ಮನ್ನು ಅಲ್ಲಿಂದ ಆಂಬುಲೆನ್ಸ್‌ನಲ್ಲಿ ರಟ್ಟೀಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸಾಕ್ಷಿಯು 4 ಜನರನ್ನು ಮಾತ್ರ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಅಲ್ಲಿಂದ ಚಾಸಾ-6, 12 ಮೃತ ಮಲ್ಲಮ್ಮಳಿಗೆ ಹೆಚ್ಚಿನ ಚಿಕಿತ್ಸೆಗಾಗಿ ರಾಣೆಬೆನ್ನೂರಿಗೆ ಹೋಗುತ್ತಿದ್ದಾಗ, ರಟ್ಟೀಹಳ್ಳಿಯ ಪೆಟ್ರೋಲ್ ಬಂಕ್ ಹತ್ತಿರ ಮಲ್ಲಮ್ಮ ಮರಣ ಹೊಂದಿರುತ್ತಾರೆ ಎಂದರೆ ಸರಿ. ನಂತರ ಮೃತ ಮಲ್ಲಮ್ಮಳನ್ನು ಶವಗಾರಕ್ಕೆ ಸೇರಿಸಿ ಚಾಸಾ-6 ಹಾಗೂ ಚಾಸಾ-12 ಶಿವಮೊಗ್ಗದ ಮೆಗ್ಗಾನ ಆಸ್ಪತ್ರೆಗೆ ಹೋಗಿರುತ್ತಾರೆ ಎಂದರೆ ಸರಿ.

5. ನಂತರ ಈ ಬಗ್ಗೆ ಚಾಸಾ-1 ರವರು ದೂರನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ನಾನು ಮೋಟಾರ್ ಸೈಕಲ್‌ನ ಚಾಲಕನ ತಪ್ಪಿನಿಂದಲೂ ಅಪಘಾತ ಆಗಿದೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ತಿರಸ್ಕರಿಸಿದ ಹೇಳಿಕೆ ಭಾಗವನ್ನು ನಿಪಿ-31 ಎಂದು ಗುರುತಿಸಲಾಯಿತು. ಸಾಮಾನ್ಯವಾಗಿ ಆಟೋ ನಿಧಾನವಾಗಿ ಹೋದಾಗ ಪಲ್ಟಿ ಆಗುವುದಿಲ್ಲ ಎಂದರೆ ಸರಸಿಯಲ್ಲ. ಸದರಿ ಅಪಘಾತ ಮೋಟಾರ್ ಚಾಲಕ ಹಾಗೂ ಆಟೋ ಚಾಲಕ ಇಬ್ಬರು ತಪ್ಪಿನಿಂದಲೂ ಆಗಿದೆ ಎಂದು ಗೊತ್ತಿದ್ದರೂ ಸಹ ನಾನು ಮೋಟಾರ್ ಸೈಕಲ್ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ 1 ರವರ ಪರ ಶ್ರೀ. ವಿ.ವಿ.ಎಮ್. ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ** ಆರೋಪಿ 2 ರವರ ಪರ ಶ್ರೀ. ಆರ್.ಡಿ.ಹೆಚ್. ಪರ ಶ್ರೀ. ಹೆಚ್.ಆರ್.ಎ. ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.